ಸುತ್ತಮುತ್ತಲಿರುವ ಕೆರೆಗಳನ್ನು ಅರಣ್ಯ ಇಲಾಖೆಗೆ ವಹಿಸಿದ್ದಾರೆ. ಆದರೆ ಆ ಕೆರೆಗಳ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂಬ ಬಗ್ಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್, ಸರ್ವೆ ಡಿಪಾರ್ಟ್‌ಮೆಂಟ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರನ್ನೊಳಗೊಂಡಂತೆ ಜಂಟಿಯಾಗಿ ಕಾರ್ಯಾಚರಣೆ ಮಾಡಿಸಿ ತದನಂತರ ಆ ಕೆರೆಗಳ ಜಾಗಗಳಲ್ಲಿ ಏನು ಈಗಾಗಲೇ ಎನ್‌ಕ್ರೋಚ್‌ಮೆಂಟ್ ಆಗಿದೆಯೋ ಅದನ್ನು ತಕ್ಷಣ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಡುವುದಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರ ಯೋಜನೆ ಮಾಡಿದೆಯೇ ಎಂಬ ಬಗ್ಗೆ ತಿಳಿಸಬೇಕು. ಇನ್ನು ಬೆಂಗಳೂರು ನಗರದ ಸುತ್ತಮುತ್ತ ಅರಣ್ಯ ಇಲಾಖೆಯವರು ಸುಮಾರು ಕೆರೆಗಳನ್ನು ಅರ್ಧಂಬರ್ಧ ಮಾಡಿ ನಿಲ್ಲಿಸುತ್ತಿದ್ದಾರೆ. ಇದರ ಬಗ್ಗೆ ನಾವು ಅವರನ್ನು ಕೇಳಿದರೆ, ನಾವೇನು ಮಾಡುವುದು, ರೆವಿನ್ಯೂ ಇಲಾಖೆಯವರು ಮತ್ತು ಸರ್ವೆ ಡಿಪಾರ್ಟ್‌ಮೆಂಟ್‌ನವರು ಸರಿಯಾಗಿ ಪ್ರದೇಶವನ್ನು ಗುರುತಿಸಿ ನಮಗೆ ಕೊಡಬೇಕಾದ ಸಹಕಾರವನ್ನು ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ದಯಮಾಡಿ ಸಚಿವರು ಒಂದು ಸಭೆಯನ್ನು ಕರೆದು ಕೆರೆಗಳು ಎಷ್ಟಿವೆ ಮತ್ತು ಅವುಗಳ ವಿಸ್ತೀರ್ಣವೆಷ್ಟು ಎಂಬ ಬಗ್ಗೆ ಗುರುತಿಸಿ ಅದನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ನಾಗಮಂಗಲ ತಾಲ್ಲೂಕಿನಲ್ಲಿ ಸಾರಿಗೆ ವ್ಯವಸ್ಥೆ**

60 (683) ಶ್ರೀ ಚಲುವರಾಯ ಸ್ವಾಮಿ .ಎಸ್ (ನಾಗಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನಾಗಮಂಗಲ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋ ನಿರ್ಮಿಸಲು ಉದ್ದೇಶಿಸಲಾಗಿದೆಯೆ ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಆ) ನಾಗಮಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಪ್ರದೇಶಗಳಿಗೆ ತುಮಕೂರು, ಮೈಸೂರು, ಚೆನ್ನರಾಯಪಟ್ಟಣ, ಮಂಡ್ಯ ಹಾಗೂ ಹಾಸನ ಡಿಪೋಗಳಿಂದ ಬಸ್ಸುಗಳು ಸಂಚರಿಸುತ್ತಿದ್ದು ಇವುಗಳು ಸಮಯಕ್ಕೆ ಸರಿಯಾಗಿ ಬರದೆ ಹಾಗೂ ಕೆಲವೊಮ್ಮೆ ಬಸ್ಸುಗಳು ಬರದಿರುವುದರಿಂದ ನಾಗರೀಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸಮಯಕ್ಕೆ ಸರಿಯಾಗಿ ಬಸ್ಸುಗಳು ಸಂಚರಿಸುವಂತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು, ಆದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೂಕ್ತ ನಿವೇಶನ ದೊರಕಬೇಕಾಗಿದೆ ನಿವೇಶನ ದೊರಕಿದ ನಂತರ ಡಿಪೋ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು.

ಆ) ಹೌದು

ಇ) ಹೌದು, ರದ್ದತಿ ಪ್ರಮಾಣವನ್ನು ಕಡಿಮೆಗೊಳಿಸಲು ನಿಯಮಿತವಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದ್ದು ಇದರಿಂದಾಗಿ ಸಾರಿಗೆಯನ್ನು ದೈನಂದಿನ ವೇಳೆಯನ್ನು ಸಾರವಾಗಿ ಆಚರಣೆಗೊಳಿಸಲು ಸಹ ಪ್ರಯತ್ನಿಸಲಾಗುತ್ತಿದೆ.

12. 10 ಪಿ.ಎಂ.

ಶ್ರೀ ಎನ್.ಚೆಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ನನ್ನ ಪ್ರಶ್ನೆಗಳಿಗೆ ಉತ್ತರವನ್ನೇನೋ ಒದಗಿಸಿದ್ದಾರೆ. ಆದರೆ ನನ್ನ ಪ್ರಶ್ನೆಗೆ ಸ್ಪಷ್ಟವಾದ ಉತ್ತರವನ್ನು ನಾನು ಸರ್ಕಾರದಿಂದ ಅಪೇಕ್ಷಿಸುತ್ತೇನೆ. ಮೊದಲಿನೆಯದಾಗಿ ನಾಗಮಂಗಲದಲ್ಲಿ ಬಸ್ ಡಿಪೋ ಅವಶ್ಯಕತೆ ಇರುವುದರಿಂದ ಅದನ್ನು ಸ್ಥಾಪನೆ ಮಾಡುತ್ತೀರಾ ಎಂದು ಕೇಳಿರುವುದಕ್ಕೆ ನಿವೇಶನ ದೊರೆತಿಲ್ಲ, ನಿವೇಶನ ದೊರೆತ ತಕ್ಷಣ ಬಸ್ ಡಿಪೋ ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದಕ್ಕೆ ಬೇಕಾದ ನಿವೇಶನವನ್ನು ಇನ್ನು ಎರಡು ತಿಂಗಳೊಳಗೆ ಡಿ.ಸಿ. ಯವರಿಗೆ ಹೇಳಿ ತಹಶೀಲ್ದಾರ್ ಮೂಲಕ ಸಾರಿಗೆ ಇಲಾಖೆಗೆ ಗುರುತಿಸತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ. ಇದರ ಜೊತೆಗೆ ರಾಜ್ಯಸಭಾ ಮತ್ತು ಲೋಕಸಭಾ ಸದಸ್ಯರಿಂದ ಕೂಡ ಹತ್ತು ಲಕ್ಷ ರೂಪಾಯಿಗಳನ್ನು ನಾನು ಕೊಡಿಸುತ್ತೇನೆ. ಬಸ್ ಡಿಪೋ ಸ್ಥಾಪಿಸುವ ಬಗ್ಗೆ ಇಂದು ಭರವಸೆಯನ್ನು ಕೊಟ್ಟಿರುವ ಬಸ್ ಮಾರ್ಗಗಳನ್ನು ಆಗಿಂದಾಗ್ಗೆ ಸ್ಥಗಿತಗೊಳಿಸಲಾಗುತ್ತಿದೆ. ನನ್ನ ತಾಲ್ಲೂಕು ಬಹಳ ದೊಡ್ಡ ವಿಸ್ತೀರ್ಣದ್ದಾಗಿದ್ದು, 20-30 ಹಳ್ಳಿಗಳಿರತಕ್ಕಂಥ ಇಲ್ಲಿ ತಾರ್ ರಸ್ತೆ ಇದ್ದರೂ ಸಹ ಬಸ್ಸಿನ ವ್ಯವಸ್ಥೆಯಾಗಿಲ್ಲ. ಇಲ್ಲಿಗೆ ತುಮಕೂರು, ಚನ್ನರಾಯಪಟ್ಟಣ, ಮಂಡ್ಯ, ಮೈಸೂರು ಎಲ್ಲ ಕಡೆಗಳಿಂದ ಆಗತಕ್ಕಂಥ ವ್ಯವಸ್ಥೆಯಿದ್ದು, ಇಲ್ಲಿ ಬಸ್ ಡಿಪೋ ಇಲ್ಲದೇ ಇರುವುದರಿಂದ , ಈ ಬಗ್ಗೆ ಈಗಾಗಲೇ ನನ್ನ 2-3 ಪತ್ರಗಳಿಗೆ ನೀವು ಡೈರೆಕ್ಷನ್ ಕೊಟ್ಟಿದ್ದೀರಿ, ನೀವು ಎಷ್ಟು ಫಾಸ್ಟ್ ಆಗಿ ಡೈರೆಕ್ಷನ್ ಕೊಟ್ಟಿದ್ದೀರೋ ಅಷ್ಟು ಫಾಸ್ಟ್ ಆಗಿ ಅದು ಇಂಪ್ಲಿಮೆಂಟ್ ಆಗುತ್ತಿಲ್ಲ. ಆದ್ದರಿಂದ ಸಂಭಂದಪಟ್ಟ 3-4 ಡಿವಿಷನ್‌ಗಳಿಗೆ ನೀವು ಕಳುಹಿಸಿರುವ ಪತ್ರದಂತೆ ಮಾಡಲೇಬೇಕು ಎನ್ನುವ ಡೈರೆಕ್ಷನ್ ಕೊಡಬೇಕು ಎನ್ನುವ ಬಗ್ಗೆ ಸಚಿವರಿಂದ ಸ್ಪಷ್ಟವಾದಂಥ ಉತ್ತರವನ್ನು ಕೇಳುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಶಾಸಕರು ಕೇಳಿರುವಂತೆ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಜಾಗದ ಲಭ್ಯತೆ ಇಲ್ಲ. ಅಲ್ಲಿ ಜಾಗವನ್ನು ಒದಗಿಸಿಕೊಡುತ್ತೇನೆ ಎಂದು ಶಾಸಕರು ಹೇಳಿದ್ದಾರೆ. ಅಲ್ಲಿ ಜಾಗ ಒದಗಿಸಿ ಕೊಟ್ಟ ತಕ್ಷಣ ಬಸ್ ಘಟಕದ ಕೆಲಸವನ್ನು ಪ್ರಾರಂಭ ಮಾಡುತ್ತೇನೆ.

ಶ್ರೀ ಎಸ್. ಚಲುವರಾಯಸ್ವಾಮಿ : ಕೆಲವು ಕಡೆ ತಮ್ಮ ಆದೇಶದಿಂದ ಬಸ್ಸುಗಳನ್ನು ಹಾಕಿದ್ದರೂ ಅವು ನಿಂತಿವೆ. ತಕ್ಷಣ ಅದನ್ನು ಚಾಲನೆ ಮಾಡುತ್ತೇನೆ ಎಂದು ಹೇಳಿದ್ದೀರಿ. ನನ್ನ ತಾಲ್ಲೂಕಿನಲ್ಲಿ 30-40 ಕಿ.ಮೀ ನಿಂದ ಕೇಂದ್ರ ಸ್ಥಾನಕ್ಕೆ ಬರತಕ್ಕಂಥ ವ್ಯವಸ್ಥೆ ಇದೆ. ರಸ್ತೆ ಚೆನ್ನಾಗಿದ್ದರೂ ಬಸ್ ಸೌಲಭ್ಯವಿಲ್ಲ. ತಮ್ಮಿಂದ ಮೈಸೂರು, ಹಾಸನ ಮತ್ತು ತುಮಕೂರು ಡಿಪೋಗಳಿಗೆ ಲೆಟರ್ ಹೋಗಿದೆ. ಆದರೂ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ತಕ್ಷಣ ಅಂದರೆ ಒಂದು ವಾರ ಅಥವಾ 15 ದಿವಸಗಳಲ್ಲಿ ಕ್ರಮ ತೆಗೆದುಕೊಳ್ಳಲು ಆದೇಶ ಕೊಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಯಾವ ಯಾವ ಭಾಗಗಳಲ್ಲಿ ಬಸ್ಸುಗಳ ಅಗತ್ಯತೆ ಇದೆ ಎನ್ನುವುದನ್ನು ಪರಿಶೀಲಿಸಿ, ಅವರ ಬೇಡಿಕೆಯಂತೆ ತಕ್ಷಣ ಕ್ರಮ ತೆಗೆದುಕೊಂಡು ಅದನ್ನು ನಿವಾರಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ಸಮಯದಲ್ಲಿ ಸನ್ಮಾನ್ಯ ಸಾರಿಗೆ ಸಚಿವರು ಒಂದು ಭರವಸೆಯನ್ನು ಕೊಡಬೇಕಾಗುತ್ತದೆ. ಸಾರಿಗೆ ಸಂಸ್ಥೆಯ ಆಡಳಿತ ಮಂಡಳಿಯವರು, ಇ.ಪಿ.ಕೆ.ಎಂ. (ಅರ್ನಿಂಗ್ ಪರ್ ಕಿಲೋಮೀಟರ್) ರೂ. 9.40ಕ್ಕಿಂತ ಕಡಿಮೆ ಇರತಕ್ಕಂಥ ಎಲ್ಲ ರೂಟುಗಳನ್ನು ಕ್ಯಾನ್ಸಲ್ ಮಾಡಬೇಕು ಎನ್ನುವ ತೀರ್ಮಾನೆವನ್ನು ತೆಗೆದುಕೊಂಡಿದ್ದಾರೆ. ಈ ಬಗ್ಗೆ ಸುತ್ತೋಲೆ ಸಹ ಹೋಗಿದೆ. ಡಿವಿಷನಲ್ ಕಂಟ್ರೋಲರ್‌ಗಳು ತಿಳುವಳಿಕೆ ಕೊಟ್ಟಿದ್ದಾರೆ. ಆದ್ದರಿಂದಾಗಿ, ಎಫಿಷಿಯೆನ್ಸಿ ಜಾಸ್ತಿಯಾಗಬೇಕು ಎಂದು ಕ್ಯಾನ್ಸಲ್ ಮಾಡಿದ್ದಾರೆ. ಹಳ್ಳಿಗಳಿಗೆ ಹೋಗತಕ್ಕಂಥ ಬಸ್ಸುಗಳ ಇ.ಪಿ.ಕೆ.ಎಂ. ಒಂಬತ್ತು ರೂಪಾಯಿ ಬರಲು ಸಾಧ್ಯವಿಲ್ಲ. ಆದ್ದರಿಂದ ಅಂಥ ಕಡೆಗಳಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲದ ಒಂದು ಟ್ರಿಪ್ ಆದರೂ ಓಡಿಸಬೇಕು. ಏಕೆಂದರೆ ತಾವು ವಿದ್ಯಾರ್ಥಿಗಳಿಗೆ ಪಾಸ್‌ಗಳನ್ನು ಕೊಟ್ಟುಬಿಟ್ಟಿದ್ದೀರಿ. ಅವರು ಹೋಗಿ ಬರಬೇಕಾಗುತ್ತದೆ. ಜೊತೆಗೆ ರೈತರೂ ಸಹ ಬರಬೇಕಾಗುತ್ತದೆ. ಮಧ್ಯಾಹ್ನದ ಟ್ರಿಪ್‌ಗಳನ್ನು ಕ್ಯಾನ್ಸಲ್ ಮಾಡಿದರೂ ಪರವಾಗಿಲ್ಲ, ಬೆಳಿಗ್ಗೆ ಮತ್ತು ಸಾಯಂಕಾಲದ ಟ್ರಿಪ್‌ಗಳನ್ನು ಓಡಿಸಲು ಅನುಕೂಲವಾಗುವಂತೆ, ದಯವಿಟ್ಟು ಆ ಸುತ್ತೋಲೆಯನ್ನು ಮಾಡಿಫೈ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಸಿಂಧ್ಯಾರವರ ಸಲಹೆಯ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಬಸ್ಸುಗಳನ್ನು ನಿಲ್ಲಿಸುವಂಥ ವಿಚಾರ ಏಕೆ ಬಂದಿದೆ ಎನ್ನುವುದು ಅವರಿಗೂ ಗೊತ್ತಿದೆ. ಪ್ರಯಾಣಿಕರ ಸಂಖ್ಯೆ ಬಹಳ ಕಡಿಮೆಯಾಗಿರುವುದರಿಂದ, ಅಂಥ ಕಡೆ ನಾವು ಬಸ್ಸುಗಳನ್ನು ಸಂಚಾರ ಮಾಡಿದಾಗ ನಷ್ಟ ಅನುಭವಿಸತಕ್ಕಂಥಾದ್ದು ಅವರ ಅನುಭವಕ್ಕೂ ಬಂದಿರುವ ವಿಚಾರ ಮತ್ತು ನನ್ನ ಅನುಭವಕ್ಕೂ ಬಂದಿರುವ ವಿಚಾರ. ಆದರೆ, ಅವರು ನೀಡಿರುವ ಸಲಹೆಯ ಮೇರೆಗೆ ಬೆಳಿಗ್ಗೆ ಮತ್ತು ಸಂಜೆ ಹೊತ್ತಿನಲ್ಲಿ, ಗ್ರಾಮೀಣ ಜನರ ಅಗತ್ಯತೆ ಮೇರೆಗೆ ಬಸ್ಸುಗಳ ಸಂಚಾರದ ವ್ಯವಸ್ಥೆಯನ್ನು ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

## ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 4ನೇ ಪಟ್ಟಿಯಲ್ಲಿರುವ 165 ಪ್ರಶ್ನೆಗಳ ಪೈಕಿ 98 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

### ಖಾಸಗಿ ವಿದ್ಯಾರ್ಥಿನಿಲಯಗಳಲ್ಲಿನ ನೌಕರರ ವೇತನ

243 (84) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಮಾಸಿಕ ವೇತನ ಬಹಳ ಕಡಿಮೆ ಇರುವುದರಿಂದ ಸರ್ಕಾರದ ಗಮನಕ್ಕೆ ಬಂದಿದೆಯೇ?